ಸೆಲೆಬ್ರಿಟಿ
■ ಹನಿ

# ಡೈರೆಕ್ಟರ್ ರೆಹಮಾನ್

ಸಂಗೀತ ನಿರ್ದೇಶಕ ಎ.ಆರ್.ರೆಹಮಾನ್ ಇದೇ ಮೊದಲ ಬಾರಿಗೆ ನಿರ್ದೇಶಕನ ಹ್ಯಾಟ್ ಧರಿಸಿದ್ದಾರೆ. ಅವರ ಚೊಚ್ಚಲ ನಿರ್ದೇಶನದ 'ಲ ಮಸ್ಕ್' (Le Musk) ಹದಿಮೂರೇ ದಿನಗಳಲ್ಲಿ ಶೂಟಿಂಗ್ ಮುಗಿಸಿದೆ. ಈ ಸಿನಿಮಾದ ಚಿತ್ರಕಥೆ ಮತ್ತು ಸಂಗೀತ ನಿರ್ದೇಶನದ ಹೊಣೆ ಕೂಡಾ ರೆಹಮಾನ್ ಅವರದ್ದೇ. ಇನ್ನು ಮುಂದೆ ರೆಹಮಾನ್ ಹೆಸರನ್ನು ಬರೆಯುವಾಗ ಗಾಯಕ, ಸಂಗೀತ ನಿರ್ದೇಶಕ ಎನ್ನುವುದರ ಜತೆಗೆ ನಿರ್ದೇಶಕ ಎಂದೂ ಸೇರಿಸಿಕೊಳ್ಳಬಹುದು. ಏಕೆಂದರೆ 'ಲ ಮಸ್ಕ್' ಚಿತ್ರೀಕರಣ ಮುಗಿಸಿರುವ ರೆಹಮಾನ್ ಇನ್ನೊಂದು ಸಿನಿಮಾ ನಿರ್ದೇಶನಕ್ಕೂ ಸಿದ್ಧತೆಗಳನ್ನು ನಡೆಸುತ್ತಿದ್ದಾರೆ!

ರೆಹಮಾನ್ ಚಿತ್ರದ ವಿಶೇಷವೆಂದರೆ ಇದು ಮಾಮೂಲಿ ಚಿತ್ರವಲ್ಲ, 'ವರ್ಚುವಲ್ ರಿಯಾಲಿಟಿ'ಯ ಮಲ್ಟಿ ಡೈಮೆನ್ಷನ್ ಚಿತ್ರ. ಥಿಯೇಟರಿನಲ್ಲಿ ಕುಳಿತ ನೀವು ಕಿವಿ, ಕಣ್ಣು, ಮೂಗು ಎಲ್ಲವೂ ಕವರ್ ಆಗುವ ಹೆಡ್‌ಫೋನ್ ಹಾಕಿಕೊಂಡು ನೋಡಬೇಕಾದ ಚಿತ್ರ. ದೆಹಲಿಯಲ್ಲಿ ಈಗಾಗಲೆ ಪಿವಿಆರ್ ನವರು ಮೊದಲ 'ವಿ.ಆರ್ ಲಾಂಜ್' ಆರಂಭಿಸಿದ್ದಾರೆ. ಸದ್ಯದಲ್ಲೇ ಬೆಂಗಳೂರು ಮತ್ತು ಮುಂಬೈಗಳಲ್ಲಿ ತಲಾ ಮೂರು ವಿ.ಆರ್ ಲಾಂಜ್‌ಗಳನ್ನು ಆರಂಭಿಸುವುದಾಗಿ ಹೇಳಿದ್ದಾರೆ. ರೆಹಮಾನ್ ಸಿನಿಮಾ ದ ಟ್ರೇಲರ್ ಈಗಾಗಲೆ ವಿದೇಶದಲ್ಲಿ ಮತ್ತು ದೆಹಲಿಯಲ್ಲಿ ಬಿಡುಗಡೆಯಾಗಿದೆ.

ರೆಹಮಾನ್ ಸದಾ ಬ್ಯುಸಿ ಇರುವ ವ್ಯಕ್ತಿ. ಇತ್ತೀಚೆಗಷ್ಟೇ ಬಿಡುಗಡೆಯಾದ 'ಸಚಿನ್: ಎ ಬಿಲಿಯನ್ ಡ್ರೀಮ್ಸ್' ಚಿತ್ರದಲ್ಲಿ ಆತನ ಮಗ 14ರ ಹರೆಯದ ಎ.ಆರ್.ಅಮೀನ್ ಕೂಡಾ 'ಮರ್ದ್ ಮರಾಠಾ' ಎಂಬ ಹಾಡನ್ನು ಹಾಡಿದ್ದಾನೆ. ಈ ಎಳೆಯ ಗಾಯಕ ಈಗಾಗಲೆ ತಮಿಳು, ತೆಲುಗು ಮತ್ತು ಇಂಗ್ಲಿಷ್ ಚಿತ್ರಗಳಲ್ಲಿ ಹಾಡಿದ್ದು ಹಿಂದಿಯಲ್ಲಿ ಇದು ಮೊದಲ ಹಾಡು. ಶ್ರೀದೇವಿ ಅಭಿನಯದ 'ಮಾಮ್' ಚಿತ್ರಕ್ಕೆ ರೆಹಮಾನ್ ಸಂಗೀತ ಸಾಕಷ್ಟು ಸುದ್ದಿ ಮಾಡಿದೆ. ರಜನಿಕಾಂತ್ ಅಭಿನಯದ ಶಂಕರ್ ನಿರ್ದೇಶನದ 2.0 ಮತ್ತು ವಿಶ್ವೇಶ್ ಕೃಷ್ಣಮೂರ್ತಿ ನಿರ್ದೇಶನದ '99 ಸಾಂಗ್ಸ್' ಎನ್ನುವ ಸಿನಿಮಾಗಳಿಗೂ ರೆಹಮಾನ್‌ರದ್ದೇ ಸಂಗೀತ ನಿರ್ದೇಶನ. ಇರಾನ್‌ನ ವಿಶ್ವಪ್ರಸಿದ್ಧ ನಿರ್ದೇಶಕ ಮಾಜಿದ್ ಮಾಜಿದಿ ಅವರ 'ಬಿಯಾಂಡ್ ದಿ ಕ್ಲೌಡ್ಸ್' ಸಿನಿಮಾಕ್ಕೂ ರೆಹಮಾನ್ ಅದ್ಭುತ ಹಾಡೊಂದನ್ನು ಹಾಡಿದ್ದಾರೆ. ಜತೆಗೆ ಸಂಗೀತ ನೀಡಿದ್ದಾರೆ.

ರೆಹಮಾನ್ ವಾಸ್ತವವಾಗಿ ಮೌನವನ್ನು ಪ್ರೀತಿಸುವ ವ್ಯಕ್ತಿ. ಆದರೆ, ವರ್ಚುವಲ್ ರಿಯಾಲಿಟಿ ತಂತ್ರಜ್ಞಾನದಲ್ಲಿ ಈಗ ಬರುತ್ತಿರುವ ವೀಡಿಯೊಗಳೆಲ್ಲ ಗದ್ದಲದ್ದೇ. ಹಿಂಸೆ, ಯುದ್ಧದ ದೃಶ್ಯಗಳೇ ಹೆಚ್ಚು. ರೆಹಮಾನ್ ಈ ತಂತ್ರಜ್ಞಾನಕ್ಕೆ ಮಾರುಹೋದದ್ದು ಹೇಗೆ? 'ಲ ಮಸ್ಕ್'ನ ಟ್ರೇಲರ್ ಬಿಡುಗಡೆಯ ಗೋಷ್ಠಿಯಲ್ಲಿ ಮತ್ತು ಬಳಿಕದ ಸಂದರ್ಶನಗಳಲ್ಲಿ ರೆಹಮಾನ್ ನೀಡಿರುವ ಉತ್ತರ ಕುತೂಹಲಕರ. '2015ರಲ್ಲಿ ಯಾರೋ ಗೆಳೆಯರು ನನಗೆ ವಿಆರ್ ಸೆಟ್ ಒಂದನ್ನು ನೀಡಿದರು. ಮೂರು ತಿಂಗಳು ಅದು ಮನೆಯಲ್ಲೇ ಬಿದ್ದಿತ್ತು. ಆಮೇಲೆ ಒಮ್ಮೆ ಬಳಸಿದೆ. ಮೊದಲು ನೋಡಿದ ಯುದ್ಧದ ದೃಶ್ಯಗಳು ಅಷ್ಟು ಖುಷಿ ಕೊಡಲಿಲ್ಲ. ಆದರೆ ಕೆಲವು ರಮ್ಯ ದೃಶ್ಯಗಳು ಸಾಕಷ್ಟು ಮುದ ನೀಡಿದವು. ನನ್ನದು ಮೊದಲಿನಿಂದಲೂ ಒಂದು ಸ್ವಭಾವ. ಯಾವ ಕೆಲಸವೇ ಆಗಲಿ, ನನಗೆ ಮೋಹ ಹುಟ್ಟಿಸದಿದ್ದರೆ ಅದರಲ್ಲಿ ನಾನು ತೊಡಗಿಕೊಳ್ಳುವುದಿಲ್ಲ. ನನಗಂತೂ ಈಗ ವರ್ಚುವಲ್ ರಿಯಾಲಿಟಿಯಲ್ಲಿ ಸಾಕಷ್ಟು ವಿಷಯಗಳನ್ನು ಪ್ರೇಕ್ಷಕರಿಗೆ ಮನಮುಟ್ಟುವಂತೆ ತಲುಪಿಸಬಹುದು ಎಂದು ಖಚಿತವಾಗಿದೆ. ದಿನಕ್ಕೆ ಆರು ಗಂಟೆ ವರ್ಚುವಲ್ ರಿಯಾಲಿಟಿಯಲ್ಲೇ ಕಳೆದಿದ್ದೇನೆ. ನನ್ನ ಮುಂದಿನ ಸಿನಿಮಾ ಇದೇ ತಂತ್ರಜ್ಞಾನದಲ್ಲಿ ಭಾರತೀಯ ಪರಂಪರೆ ಮತ್ತು ನೃತ್ಯ ವೈವಿಧ್ಯಗಳ ಬಗ್ಗೆ ಬರಲಿದೆ' ಎಂದಿದ್ದಾರೆ ರೆಹಮಾನ್.

ಮೊದಲ ಸಿನಿಮಾ ನಿರ್ದೇಶನದ ಐಡಿಯಾ ಬಂದದ್ದು ರೆಹಮಾನ್‌ಗೆ ಅವರ ಪತ್ನಿ ಸಾಯಿರಾ ಬಾನು ಅವರಿಂದಂತೆ. 'ನೀವ್ಯಾಕೆ ಸುಗಂಧದ್ರವ್ಯಗಳ ಬಗ್ಗೆ ಒಂದು ಸಿನಿಮಾ ಮಾಡಬಾರದು?' ಎಂದು ಪತ್ನಿ ಪ್ರಶ್ನಿಸಿದ್ದೇ ಪ್ರೇರಣೆಯಂತೆ. 'ಕೆಲವು ಥಿಯೇಟರುಗಳನ್ನು ಆಯ್ದುಕೊಂಡು ಅಲ್ಲಿ ಸುಗಂಧದ್ರವ್ಯಗಳ ಪರಿಮಳ ಬರುವಂತೆ ತಂತ್ರಜ್ಞಾನ ಅಳವಡಿಸಿಕೊಳ್ಳಬೇಕು' ಎಂದು ರೆಹಮಾನ್ ಆಲೋಚಿಸಿದ್ದರಂತೆ. ಆದರೆ ಕೈಗೆ ವಿ.ಆರ್ ಸಿಕ್ಕಿದ್ದೇ ರೆಹಮಾನ್ ಆಲೋಚನೆಗಳಿಗೆ ವೇಗ ಸಿಕ್ಕಿತು. ಥಿಯೇಟರಿನಲ್ಲಿ ಪರಿಮಳ ಹರಡುವ ಬದಲು ಇದೇ ಸುಲಭ ಅನ್ನಿಸಿತು. 'ವರ್ಚುಲವ್ ತಂತ್ರಜ್ಞಾನದ ಸಿನಿಮಾದಲ್ಲಿ ಪ್ರೇಕ್ಷಕನಿಗೆ ಶೇಕಡಾ 70ರಷ್ಟು ಭಾಗ ತಾನೂ ಆ ದೃಶ್ಯದಲ್ಲೇ ಇದ್ದಂತೆ ಭಾಸವಾಗುತ್ತದೆ' ಎಂದು ಥ್ರಿಲ್ ಹಂಚಿಕೊಂಡಿದ್ದಾರೆ ರೆಹಮಾನ್.

ರೆಹಮಾನ್ ಮೊದಲ ಸಂಗೀತ ನಿರ್ದೇಶನದ ಚಿತ್ರ 'ರೋಜಾ' ತೆರೆಗೆ ಬಂದದ್ದು 1992ರಲ್ಲಿ. ಈ ವರ್ಷ ರೆಹಮಾನ್ ಸಿನಿಮಾ ಸಂಗೀತ ಯಾತ್ರೆಗೆ 25 ವರ್ಷ. 'ಸ್ಲಮ್ ಡಾಗ್ ಮಿಲಿಯನೇರ್', '127 ಅವರ್ಸ್' ಮತ್ತು 'ಪೆಲೆ' ಚಿತ್ರಗಳ ಸಂಗೀತದ ಮೂಲಕ ವಿಶ್ವಖ್ಯಾತಿ ಪಡೆದಿರುವ ರೆಹಮಾನ್ ಈಗಾಗಲೆ ಇರಾನಿಯನ್ ಮತ್ತು ಬ್ರಿಟಿಷ್ ಸಿನಿಮಾರಂಗದಲ್ಲೂ ಖ್ಯಾತಿ ಹೊಂದಿದವರು. 'ಲ ಮಸ್ಕ್' ಪೂರ್ಣ ರೋಮ್‌ನಲ್ಲಿ ಶೂಟಿಂಗ್ ನಡೆದಿದ್ದು ಅಲ್ಲೂ ರೆಹಮಾನ್‌ಗೆ ಅಭಿಮಾನಿಗಳು ಹುಟ್ಟಿಕೊಂಡಿದ್ದಾರೆ. ಎರಡು ಆಸ್ಕರ್, ಎರಡು ಗ್ರಾಮ್ಮಿ, ಒಂದು ಬಾಫ್ತಾ, ಒಂದು ಗೋಲ್ಡನ್ ಗ್ಲೋಬ್– ಹೀಗೆ ಅಂತರರಾಷ್ಟ್ರೀಯ ಮಟ್ಟದಲ್ಲೂ ಪ್ರಶಸ್ತಿಗಳ ಹೆಗ್ಗಳಿಕೆ ಹೊಂದಿರುವ ರೆಹಮಾನ್, ಜುಲೈನಲ್ಲಿ ನ್ಯೂಯಾರ್ಕ್‌ನಲ್ಲಿ ನಡೆಯಲಿರುವ ಭಾರತೀಯ ಸಿನಿಮಾಗಳ ವಿದೇಶಿ ಉತ್ಸವ 'ಐಫಾ'ದಲ್ಲಿ ನೀಡಲಿರುವ ಸಂಗೀತ ಕಾರ್ಯಕ್ರಮದ ಸಿದ್ಧತೆಯಲ್ಲಿ ಈಗ ಬ್ಯುಸಿ. ■



Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65